**ಓ.ಎಸ್.ನಂ. 315-2017**
**ಪಿ.ಡಬ್ಲ್ಯೂ-2.**

**<u>ದಿಃ11-06-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ.</u>**

ವಾದಿ, ಪ್ರತಿವಾದಿಯರು ಯಾವ ಕಾರಣಕ್ಕೆ ದಾವೆಯನ್ನು ದಾಖಲು ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿ ಮತ್ತು ನಾವು ಅಣ್ಣತಮ್ಮಂದಿರು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿ ಸುಮಾರು 10-15 ವರ್ಷಗಳಿಂದ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ. ವಾದಿಯ ಗಂಡನಿಂದ ನಾನು ಅದೇ ಗ್ರಾಮದ ಸರ್ವೆ ನಂಃ 34 ರಲ್ಲಿ 1 ಎಕರೆ 3 ಗುಂಟೆ ಜಮೀನನ್ನು ಕ್ರಯಪತ್ರದ ಮೂಲಕ ಖರೀದಿಸಿರುತ್ತೇನೆ. ಸದರಿ ಕ್ರಯಕ್ಕೆ ಕಲ್ಲಮ್ಮ ಅಥವಾ ಅವರ ಮಗ ಶೇಖರಪ್ಪ ತಕರಾರು ಮಾಡಿರುವುದಿಲ್ಲ. ಪ್ರತಿವಾದಿಗೂ, ನನಗೂ ಯಾವುದೇ ಸಂಬಂದ ಇರುವುದಿಲ್ಲ. ವಾದಿಯು ಅವರ ಮಗನ ಹತ್ತಿರ ಇರುತ್ತಾರೆ. ವಾದಿಗೆ ದಾವಾ ಸ್ವತ್ತನ್ನು ಪ್ರತಿವಾದಿಗೆ ಮಾರಾಟ ಮಾಡುವ ಅಧಿಕಾರ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ.

**<u>ಮರುವಿಚಾರಣೆ</u>** ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಕೇ. ಸ. ಇ. ಎ. ಒ.

ಸಹಿ/-
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**